## ನಿಮ್ಮೊಡನೆ

# ಸುಪ್ರೀಂ ತೀರ್ಪು ಸ್ವಾಗತಾರ್ಹ

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಗಳೊಬ್ಬಳು ಮದುವೆಯಾದ ಬಳಿಕ, ತನ್ನ ಮೇಲೆ ಗಂಡನಿಂದ ಅತ್ಯಾಚಾರ ನಡೆದಿದೆ ಎಂದು ದೂರು ನೀಡಿದರೆ, ಅದರ ಪರಿಣಾಮ ಮೊದಲು ಆಕೆಯ ಪೋಷಕರ ಮೇಲೆಯೇ ಆಗುತ್ತದೆ.

‘18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣಿನ ಜತೆ ನಡೆಸುವ ಲೈಂಗಿಕ ಕ್ರಿಯೆಯನ್ನು, ಮದುವೆಯಾಗಿದ್ದರೂ, ಆಗದಿದ್ದರೂ ಅತ್ಯಾಚಾರ ಎಂದೇ ಪರಿಗಣಿಸಬೇಕು’ ಎಂದು ಸುಪ್ರೀಂಕೋರ್ಟ್ ಇತ್ತೀಚೆಗೆ ತೀರ್ಪು ನೀಡಿರುವುದು ಸ್ವಾಗತಾರ್ಹ. ಈ ಮೂಲಕ ಭಾರತೀಯ ದಂಡ ಸಂಹಿತೆಯಲ್ಲಿ ಬಹಳ ಕಾಲದಿಂದ ಉಳಿದಿದ್ದ ತಪ್ಪೊಂದನ್ನು ತಿದ್ದಿ ಸರಿ ಮಾಡುವ ಅವಕಾಶ ಒದಗಿಬಂದಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 275ರಲ್ಲಿ, ‘ಪತ್ನಿಗೆ 18 ವರ್ಷಕ್ಕಿಂತ ಕಡಿಮೆ ವಯಸ್ಸಾಗಿದ್ದರೂ, 15 ವರ್ಷಕ್ಕಿಂತ ಕಡಿಮೆ ಇಲ್ಲವಾಗಿದ್ದಲ್ಲಿ, ಗಂಡನಾದವನು ನಡೆಸುವ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರ ಎಂದು ಪರಿಗಣಿಸಲಾಗದು’ ಎಂದು ನಮೂದಿಸಲಾಗಿದೆ. ಈಗ ಸುಪ್ರೀಂಕೋರ್ಟ್ ತೀರ್ಪು ಬಂದ ಬಳಿಕ, ಪತ್ನಿಗೆ 18 ವರ್ಷಕ್ಕಿಂತ ಕಡಿಮೆ ಇದ್ದರೆ ಗಂಡ ನಡೆಸುವ ಲೈಂಗಿಕ ಕ್ರಿಯೆಯನ್ನು ಇನ್ನು ಮುಂದೆ ಅತ್ಯಾಚಾರ ಎಂದೇ ಪರಿಗಣಿಸಬೇಕಾಗುತ್ತದೆ. 2013ರಲ್ಲಿ ಸರ್ಕಾರವು ಕಾನೂನಿಗೆ ತಿದ್ದುಪಡಿಯೊಂದನ್ನು ತಂದು, ಲೈಂಗಿಕ ಕ್ರಿಯೆಗೆ ಹೆಣ್ಣಿನ ಸಮ್ಮತಿ ನೀಡುವ ವಯಸ್ಸಿನ ಮಿತಿಯನ್ನು 16ರಿಂದ 18ಕ್ಕೆ ಏರಿಸಿತ್ತು. ಆದರೆ ಆ ತಿದ್ದುಪಡಿಯಾಗಿ ನಾಲ್ಕು ವರ್ಷಗಳಾಗಿದ್ದರೂ, ಐಪಿಸಿ ಸೆಕ್ಷನ್ 275ರ ಪ್ರಕಾರ, ಪತ್ನಿಯ ಜತೆಗೆ ಲೈಂಗಿಕ ಕ್ರಿಯೆ ನಡೆಸಲು ಸಮ್ಮತ ವಯಸ್ಸು 15 ಎಂದೇ ಪರಿಗಣಿಸಲಾಗಿದ್ದುದು ವಿಪರ್ಯಾಸದ ಸಂಗತಿ. ಇದರಿಂದಾಗಿ 15ರಿಂದ 18 ವರ್ಷದೊಳಗಿನ ಮದುವೆಯಾದ ಹೆಣ್ಣು ಮಕ್ಕಳಿಗೆ ಅತ್ಯಾಚಾರ ವಿರುದ್ಧದ ಕಾನೂನಿನ ರಕ್ಷಣೆ ದೊರಕದಂತಾಗಿತ್ತು.

ಸುಪ್ರೀಂಕೋರ್ಟಿನ ಈ ತೀರ್ಪಿನ ಮೂಲಕ, ನಮ್ಮಲ್ಲಿ ಕಾನೂನಿಗೆ ಹೊರತಾಗಿಯೂ ಬಾಲ್ಯವಿವಾಹಗಳು ಯಥೇಚ್ಛವಾಗಿ ನಡೆಯುತ್ತಿವೆ ಎನ್ನುವುದನ್ನು ದೃಢೀಕರಿಸಿದಂತಾಗಿದೆ. ಹೆಣ್ಣುಮಕ್ಕಳ ಮದುವೆಯಾಗುವ ವಯಸ್ಸು 18 ಎಂದು ಹಲವು ವರ್ಷಗಳ ಹಿಂದೆಯೇ ಕಾನೂನು ತಂದಿದ್ದರೂ, ಅದಕ್ಕಿಂತ ಕಡಿಮೆ ವಯಸ್ಸಿಗೇ ಸಹಸ್ರಾರು ಹೆಣ್ಣುಮಕ್ಕಳ ಮದುವೆ ನಡೆಯುವುದಕ್ಕೆ ಈ ಕಾನೂನಿನ ಗೊಂದಲ ಸಮರ್ಥನೆಯಂತೆಯೂ ಕೆಲಸ ಮಾಡಿದೆ. ಈಗ ಸುಪ್ರೀಂಕೋರ್ಟಿನ ಹೊಸ ತಿದ್ದುಪಡಿಯು ನ್ಯಾಯಾಧೀಶರಿಗೆ ಇರುವ ಗೊಂದಲವನ್ನು ನಿವಾರಿಸಬಹುದು. ಆದರೆ ಸೆಕ್ಷನ್ 275ಕ್ಕೆ ಅಧಿಕೃತ ತಿದ್ದುಪಡಿಯಾಗದಿದ್ದರೆ, ವಕೀಲರು ತಮ್ಮ ಕಕ್ಷಿದಾರರ ಪರವಾಗಿ ಈ ಸೆಕ್ಷನ್‌ನ ರಕ್ಷಣೆಯನ್ನು ಪಡೆಯುವ ಸಂಭವವೂ ಇಲ್ಲದಿಲ್ಲ. ಸರ್ಕಾರ ಶೀಘ್ರ ಕಾನೂನು ತಿದ್ದುಪಡಿಗೆ ಮನಸ್ಸು ಮಾಡಬೇಕು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಗಳೊಬ್ಬಳು ಮದುವೆಯಾದ ಬಳಿಕ, ತನ್ನ ಮೇಲೆ ಗಂಡನಿಂದ ಅತ್ಯಾಚಾರ ನಡೆದಿದೆ ಎಂದು ದೂರು ನೀಡಿದರೆ, ಅದರ ಪರಿಣಾಮ ಮೊದಲು ಆಕೆಯ ಪೋಷಕರ ಮೇಲೆಯೇ ಆಗುತ್ತದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗಳಿಗೆ ಮದುವೆ ಮಾಡಿಕೊಟ್ಟ ಪೋಷಕರು ಬಾಲ್ಯವಿವಾಹ ಕಾಯ್ದೆಯನ್ವಯ ಮೊದಲ ಆರೋಪಿಗಳಾಗುತ್ತಾರೆ. ಗಂಡನ ವಿರುದ್ಧ ಅತ್ಯಾಚಾರದ ಸಿಟ್ಟು ಇದ್ದರೂ, ತನ್ನ ಪೋಷಕರನ್ನು ತೊಂದರೆಗೆ ಸಿಲುಕಿಸಲು ಯಾವ ಹೆಣ್ಣುಮಗಳೂ ಸಿದ್ಧಳಿರುವುದಿಲ್ಲ. ಹಾಗಾಗಿ ಇಂತಹ ಪ್ರಕರಣಗಳಲ್ಲಿ ಹೆಣ್ಣುಮಕ್ಕಳು ದೂರು ನೀಡಲು ಮುಂದೆ ಬರುವುದು ಕಷ್ಟ. ಅಕಸ್ಮಾತ್ ಸ್ವಯಂಸೇವಾ ಸಂಸ್ಥೆಗಳು ಅಥವಾ ಕುಟುಂಬದ ಯಾವುದೇ ಸದಸ್ಯರು ಇಂತಹ ಅತ್ಯಾಚಾರದ ಪ್ರಕರಣಗಳನ್ನು ಗುರುತಿಸಿ, ದೂರು ನೀಡಿದರೂ ಇಲ್ಲಿ ಮದುವೆಯಾದ ಅಪ್ರಾಪ್ತ ವಯಸ್ಸಿನ ಹೆಣ್ಣುಮಗಳು ತಳೆಯುವ ನಿಲುವೇ ಮುಖ್ಯವಾಗುತ್ತದೆ.

ಸುಪ್ರೀಂಕೋರ್ಟ್ ಈಗ ನೀಡಿರುವ ತೀರ್ಪು ಬಾಲ್ಯವಿವಾಹವನ್ನು ತಡೆಯುವ ನಿಟ್ಟಿನಲ್ಲಿ ನೆರವಾಗಲಿದೆ ಎನ್ನುವುದು ಸರಿಯೇ. ಆದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳಿಗೆ ವಿವಾಹ ಮಾಡುವುದನ್ನು ತಡೆಯುವುದು ಕೇವಲ ಕಾನೂನಿನಿಂದ ಆಗುವ ಕೆಲಸವಲ್ಲ ಎನ್ನುವುದು ಸ್ಪಷ್ಟ. ಬಾಲ್ಯವಿವಾಹದ ಕುರಿತು ಪೋಷಕರು ಮತ್ತು ಸಮಾಜದ ಸದಸ್ಯರು– ಇಬ್ಬರೂ ಕಠಿಣ ನಿಲುವು ತಳೆಯಬೇಕಾಗಿದೆ. ಪ್ರಾಪ್ತ ವಯಸ್ಸು ದಾಟದೆ ಹೆಣ್ಣುಮಕ್ಕಳಿಗೆ ನಡೆಸುವ ಮದುವೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಕಠಿಣ ಸಮಸ್ಯೆಗಳು ಎದುರಾಗಲಿವೆ ಎನ್ನುವುದನ್ನು ಪೋಷಕರಿಗೆ ಮನದಟ್ಟು ಮಾಡಲು ಸರ್ಕಾರ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕಿದೆ. ಬಾಲ್ಯವಿವಾಹವನ್ನು ಸಮರ್ಥಿಸುವ ಕೆಲವು ಸಾಮಾಜಿಕ ಸಂಪ್ರದಾಯಗಳನ್ನು ತೊಲಗಿಸಲೂ ಕಠಿಣ ಕ್ರಮಗಳನ್ನು ರೂಪಿಸಬೇಕಿದೆ.

■ ಬಿ.ಎಂ. ಹನೀಫ್



ಕಣಕಾಲಮಠ